ಓ.ಎಸ್ ನಂ. 41/2020 ಪಿ.ಡಬ್ಲೂಃ 1

ದಿನಾಂಕಃ 22.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು 2 ನೇ ಪ್ರತಿವಾದಿಯ ಪರ ಶ್ರೀ. ಎ.ಎಸ್. ವಕೀಲರಿಂದ

ನನ್ನ ತಂದೆಯ ಹೆಸರು ತಿರುಮಲೇಗೌಡ. ತಿರುಮಲೇಗೌಡರಿಗೆ ಇಬ್ಬರು ಗಂಡು ಮಕ್ಕಳು ನಾನು ಮತ್ತು ಗಿರೀಶ, ಹಾಗೂ ಮೂರು ಜನ ಹೆಣ್ಣು ಮಕ್ಕಳು ಅವರ ಹೆಸರು ಜಯಲಕ್ಷ್ಮಿ, ಅನಿತ ಮತ್ತು ಶೋಭ. ನನ್ನ ತಂದೆ ಯಾವುದೇ ಸರ್ಕಾರಿ ನೌಕರಿ ಮಾಡುತ್ತಿರಲಿಲ್ಲ, ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಯ ಊರು ಚನ್ನರಾಯಪಟ್ಟಣ ತಾಲ್ಲೂಕು, ಬಾಗೂರು ಹೋಬಳಿಯ, ಅಗ್ರಹಾರ. ನಾನು ಚನ್ನರಾಯಪಟ್ಟಣದಲ್ಲಿ ವಾಸವಾಗಿದ್ದೇನೆ ಆದರೆ ಚುನಾವಣೆಗೆ ಓಟ್ ಅನ್ನು ಅಗ್ರಹಾರದಲ್ಲಿ ಹಾಕುತ್ತೇನೆ. ನನ್ನ ತಂದೆಗೆ ಏನು ಆಸ್ತಿ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಆಸ್ತಿಗಳು ಬಂದಿದ್ದವು. ನಾವು ಚಿಕ್ಕವರಿದ್ದಾಗಲೇ ನನ್ನ ತಂದೆ ಹಾಗೂ ಅವರ ಸಹೋದರರ ಮಧ್ಯೆ ವಿಭಾಗವಾಗಿದ್ದು, ವಿಭಾಗದಲ್ಲಿ ನನ್ನ ತಂದೆಗೆ ಆಸ್ತಿ ಬಂದಿದ್ದವು. ವಿಭಾಗದಲ್ಲಿ ನನ್ನ ತಂದೆ 3-4 ಎಕರೆ ಜಮೀನು ಬಂದಿರುತ್ತದೆ. ಅವೆಲ್ಲವುಗಳು ಸ್ವಲ್ಪ ಖುಷ್ಕಿ ಹಾಗೂ ಸ್ವಲ್ಪ ತೋಟ ಇರುತ್ತದೆ. ಪಿತ್ರಾರ್ಜಿತವಾಗಿ ನನ್ನ ತಂದೆಗೆ ಬಂದ ಆಸ್ತಿಗಳ ಪೈಕಿ ಬಹುಪಾಲು ಮಳೆ ಆಶ್ರಿತ ಜಮೀನುಗಳು ಎಂದರೆ ಸಾಕ್ಷಿ ಬಾವಿ ಮತ್ತು ಬೋರ್‌ವೆಲ್‌ಗಳು ಸಹಾ ಇವೆ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ ಯಾವ ಯಾವ ಸರ್ವೆ ನಂಬರ್‌ನಲ್ಲಿ ಆಸ್ತಿ ಬಂದಿದ್ದವು ಎಂದು ಈಗ ನನಗೆ ಹೇಳಲು ಬರುವುದಿಲ್ಲ.

ನನ್ನ ತಂದೆಗೆ ಬಂದಂತಹ ಆಸ್ತಿಗಳಲ್ಲಿ ನಾನು, ನನ್ನ ಸಹೋದರ ಸಹೋದರಿಯರೆಲ್ಲರೂ ಪಾಲು ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ನೋಂದಾಯಿತ ವಿಭಾಗ ಪತ್ರದ ಮೂಲಕ ನಾವು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ನಾನು ಸಹಾ ವ್ಯವಸಾಯ ಮಾಡಿಕೊಂಡಿರುತ್ತೇನೆ.

ವಿಭಾಗದಲ್ಲಿ ನನಗೆ 2 ಎಕರೆ ಚಿಲ್ಲರೆ ಜಮೀನು ಬಂದಿರುತ್ತದೆ. ನನ್ನ ತಮ್ಮನಿಗೂ ಸಹಾ ವಿಭಾಗದಲ್ಲಿ ಅಷ್ಟೇ ಕ್ಷೇತ್ರ ಬಂದಿರುತ್ತದೆ. ಪಿತ್ರಾರ್ಜಿತ ಆಸ್ತಿಗಳಲ್ಲಿ ನಾವೆಲ್ಲರೂ ಪಾಲು ಭಾಗ ಮಾಡಿಕೊಂಡಿದ್ದಕ್ಕೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನಗೆ ಬಂದಂತಹ ಎರಡು ಎಕರೆ ಚಿಲ್ಲರೆ ಜಮೀನಿನ ಪೈಕಿ 1 ಎಕರೆ ಖುಷ್ಕಿ ಹಾಗೂ 1 ಚಿಲ್ಲರೆ ಎಕರೆ ತೋಟ ಇರುತ್ತದೆ. ತೋಟದಲ್ಲಿ ನಾನು ತೆಂಗು ಬೆಳೆದಿರುತ್ತೇನೆ. ನನ್ನ ತೋಟದಲ್ಲಿ 70 ತೆಂಗಿನ ಮರಗಳು ಇವೆ.

ಅಗ್ರಹಾರದಲ್ಲಿಯ ನನ್ನ ಜಮೀನಿನಿಂದ ಒಂಟಿ ಗುಡ್ಡ ಕಾವಲು ಗ್ರಾಮದ ಜಮೀನು ಸುಮಾರು 15 – 16 ಕಿಮೀ ದೂರ ಆಗುತ್ತದೆ. ಅಗ್ರಹಾರದಲ್ಲಿಯ ನನ್ನ ಜಮೀನಿನಿಂದ ಒಂಟಿ ಗುಡ್ಡ ಕಾವಲಿನ ಜಮೀನು ಸುಮಾರು 40 ಕಿಮೀ ದೂರ ಆಗುತ್ತದೆ ಎಂದರೆ ಸರಿಯಲ್ಲ. ನನ್ನ ದಾವೆ ಶಿರೋನಾಮೆಯಲ್ಲಿ ಹೇಳಿರುವಂತೆ ನಾನು ಚನ್ನರಾಯಪಟ್ಟಣದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಆಧಾರ್ ಕಾರ್ಡ್ ಅಗ್ರಹಾರ ಗ್ರಾಮದ ವಿಳಾಸದಲ್ಲಿ ಇದೆ ಎಂದರೆ ಸರಿ. ನನಗೆ ಬಿಪಿಎಲ್ ರೇಷನ್ ಕಾರ್ಡ್ ಇದೆ.

1 ನೇ ಪ್ರತಿವಾದಿ ಚನ್ನರಾಯಪಟ್ಟಣ ಹೊಸ ಹೌಸಿಂಗ್ ಬೋರ್ಡ್‌ನಲ್ಲಿ ಇದ್ದು, ನಾನು ವಿವೇಕಾನಂದ ನಗರದಲ್ಲಿ ವಾಸವಾಗಿದ್ದೇನೆ ಹೀಗಾಗಿ ಸುಮಾರು 15 ವರ್ಷಗಳಿಂದ ನನಗೆ 1 ನೇ ಪ್ರತಿವಾದಿ ಪರಿಚಯ ಇರುತ್ತಾರೆ. ಈ ಪರಿಚಯದಲ್ಲಿ ನಿಮ್ಮಿಬ್ಬರ ನಡುವೆ ಯಾವುದಾದರೂ ಹಳೆಯ ವ್ಯವಹಾರಗಳು ಆಗಿವೆಯ ಎಂದರೆ ಸಾಕ್ಷಿ ಹಳೆಯ ವ್ಯವಹಾರಗಳು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ವ್ಯವಸಾಯ ಮಾಡುತ್ತಾರೆ. 1 ನೇ ಪ್ರತಿವಾದಿಗೆ ಎಷ್ಟು ಜನ ವಾರಸುದಾರರ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ 1 ನೇ ಪ್ರತಿವಾದಿಗೆ ದೊರೆಸ್ವಾಮಿ ಅಂತ ಗಂಡ ಹಾಗೂ ಅವರ ಗಂಡನಿಗೆ ಒಬ್ಬರು ತಾಯಿ ಇರುತ್ತಾರೆ. 1 ನೇ ಪ್ರತಿವಾದಿಯ ಅಣ್ಣ ತಮ್ಮಂದಿರ ಬಗ್ಗೆ ಗೊತ್ತ ಎಂದರೆ ಸಾಕ್ಷಿ ಪ್ರತಿವಾದಿಯ ಅಣ್ಣ ಒಬ್ಬರು ಬೆಂಗಳೂರಿನಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಅಣ್ಣ ಬೆಂಗಳೂರಿನಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಆರ್ಟಿಕಲ್ಚರ್‌ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಎದುರುದಾರರ ಅಣ್ಣನ ಹೆಸರು

ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನನಗೆ 15 ವರ್ಷಗಳಿಂದ ಗೊತ್ತು ಹಾಗೂ ಅವರ ಕುಟುಂಬದ ಬಗ್ಗೆ ನನಗೆ ಗೊತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವ್ಯವಹಾರಕ್ಕೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯನ್ನು ಮೊದಲನೇ ಬಾರಿ ನನ್ನನ್ನು ಚನ್ನರಾಯಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ಭೇಟಿಯಾಗಿರುತ್ತಾರೆ. ಜಮೀನಿನ ವಿಷಯವಾಗಿಯೇ 1 ನೇ ಪ್ರತಿವಾದಿ ನನ್ನನ್ನು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಭೇಟಿಯಾಗಿರುತ್ತಾರೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1 ನೇ ಪ್ರತಿವಾದಿಗೆ ಯಾವುದೇ ಜಮೀನು ಇರುವುದಿಲ್ಲ. ತಾಲ್ಲೂಕು ಕಚೇರಿಯಲ್ಲಿ ಸುಮಾರು 1 ಗಂಟೆಗಳ ಕಾಲ ಮಾತುಕತೆಯಾಗಿರುತ್ತದೆ. 1 ನೇ ಪ್ರತಿವಾದಿಯೊಂದಿಗೆ ನಾಗರಾಜು, ತಿರುಮಲೇಗೌಡ ಹಾಗೂ ರಂಗೇಗೌಡರು ಇದ್ದರು. ದಾವೆಗೆ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ಹೇಳಿರುತ್ತೇನೆ. ನಾನು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಇಂಗ್ಲೀಷ್ ಬಾಷೆ ನನಗೆ ಅಷ್ಟೊಂದು ಅರ್ಥವಾಗುವುದಿಲ್ಲ, ಇಂಗ್ಲೀಷ್ ಬಾಷೆಯಲ್ಲಿ ಇದ್ದುದ್ದನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಹೇಳಿದರೆ ಅರ್ಥವಾಗುತ್ತದೆ. 1 ನೇ ಪ್ರತಿವಾದಿಯು ಅವರ ಅಣ್ಣನೊಂದಿಗೆ ನನ್ನನ್ನು ಬಂದು ಭೇಟಿ ಆಗಿರುತ್ತಾರೆ ಎಂದು ದಾವೆಯಲ್ಲಿ ಬರೆಸಿದ್ದೀರ ಎಂದರೆ ಸಾಕ್ಷಿ ಬರೆಸಿದ್ದೇನೆ, ಅವರಿಬ್ಬರೂ ನನ್ನನ್ನು ಭೇಟಿ ಮಾಡಿದ್ದರು ಎಂದು ನುಡಿಯುತ್ತಾರೆ. ತಾಲ್ಲೂಕು ಕಚೇರಿಯಲ್ಲಿ 1 ನೇ ಪ್ರತಿವಾದಿ ನನ್ನನ್ನು ಭೇಟಿ ಮಾಡಿದಾಗ ಮಧ್ಯಾಹ್ನ ಸುಮಾರು 2 ಗಂಟೆ ಆಗಿತ್ತು. ವ್ಯವಹಾರದ ಬಗ್ಗೆ ಮಾತುಕತೆಯು ದಿನಅಂಕ : 10.07.2016 ರಂದು ಆಗಿರುತ್ತದೆ. ದಿನಾಂಕ : 10.07.2016 ರಂದು ಮಾತುಕತೆಯಾದಾಗ 1 ನೇ ಪ್ರತಿವಾದಿ ನನಗೆ ಆರ್.ಟಿ.ಸಿ., ಮುಟೇಷನ್ ಮತ್ತು ಮೂಲ ಗ್ರ್ಯಾಂಟ್ ಸರ್ಟಿಫಿಕೇಟ್ ಮತ್ತು ಇ.ಸಿ. ಕೊಟ್ಟಿದ್ದರು. 1 ನೇ ಪ್ರತಿವಾದಿ ನನಗೆ 13 ವರ್ಷದ ಇ.ಸಿ. ಕೊಟ್ಟಿದ್ದರು. ನಾನು ಸದರಿ ಇ.ಸಿ. ಪ್ರತಿ ನನ್ನ ಬಳಿ ಇದೆ. ದಿನಾಂಕ : 10.07.2016 ರಂದು ಪಹಣಿಯನ್ನು ಪ್ರಿಂಟ್ ತೆಗೆಸಿ ನನಗೆ ಕೊಟ್ಟಿದ್ದರು. ಸದರಿ ದಿನ ದಿನಾಂಕ : 10.07.2016 ರಂದು ಪ್ರಿಂಟ್ ತೆಗೆಸಿ ಕೊಟ್ಟಂತಹ ಆರ್.ಟಿ.ಸಿ. ನನ್ನ ಬಳಿ ಇದೆ.

1 ನೇ ಪ್ರತಿವಾದಿ ಗಂಡ ದೊರೆಸ್ವಾಮಿ ರವರಿಗೆ ಬೇರೆ ಕಡೆ ಜಮೀನು ಇದ್ದ ಬಗ್ಗೆ ನಿಮಗೆ ಮಾಹಿತಿ ಇದೆಯ ಎಂದರೆ ಸಾಕ್ಷಿ ಸಕಲೇಶಪುರ ತಾಲ್ಲೂಕು, ಸಿಂಗಾಪುರದಲ್ಲಿ ದೊರೆಸ್ವಾಮಿ ರವರಿಗೆ ಜಮೀನು ಇದೆ ಎಂದು ನನಗೆ ಹೇಳಿದ್ದರು, ಆದರೆ ನಾನು ದಾಖಲಾತಿಗಳನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ದೊರೆಸ್ವಾಮಿ ರವರಿಗೆ ಸಿಂಗಾಪುರ ಗ್ರಾಮದಲ್ಲಿ ತೋಟ ಇದೆ ಎಂದು ಹೇಳಿದ್ದರು. ದಿನಾಂಕ : 10.07.2016 ರಂದು 1 ನೇ ಪ್ರತಿವಾದಿ ನಿಮಗೆ ಕೊಟ್ಟಿದ್ದರು ಎಂದು ಹೇಳುವ

ಪಹಣಿಯಲ್ಲಿ ನೀವು ಯಾವ ಯಾವ ಅಂಶಗಳನ್ನು ನೋಡಿರುತ್ತೀರಿ ಎಂದರೆ ಸಾಕ್ಷಿ ಕುಂಚೇವು ಸೊಸೈಟಿಯಲ್ಲಿ ಸಾಲ ಇದ್ದ ಬಗ್ಗೆ ಪಹಣಿಯಲ್ಲಿ ನಮೂದಿದ್ದು, ಇದನ್ನು ಬಿಟ್ಟು ಬೇರೆ ಏನು ಇರಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕ : 10.07.2016 ರಂದು 1 ನೇ ಪ್ರತಿವಾದಿ ನನಗೆ ನೀಡಿದ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. 1 ನೇ ಪ್ರತಿವಾದಿಯಿಂದ ಆ ದಿನ ಪಡೆದುಕೊಂಡ ಎಲ್ಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಜುಲೈ 2016 ನೇ ಇಸವಿಯಲ್ಲಿ 1 ನೇ ಪ್ರತಿವಾದಿ ತಾಲ್ಲೂಕು ಕಚೇರಿಯಲ್ಲಿ ನನ್ನನ್ನು ಭೇಟಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನನ್ನು ಭೇಟಿ ಮಾಡುವ ಯಾವುದೇ ಪ್ರಸಂಗ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕೇಂದ್ರ ಸ್ಥಾನ ಹೊಳೆನರಸೀಪುರ ತಾಲ್ಲೂಕು ಇರುವುದರಿಂದ ಚನ್ನರಾಯಪಟ್ಟಣದ ತಾಲ್ಲೂಕು ಕಚೇರಿಯಲ್ಲಿ 1 ನೇ ಪ್ರತಿವಾದಿ ನನ್ನನ್ನು ಭೇಟಿ ಮಾಡುವ ಯಾವುದೇ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ.

ಬಾಗೂರು ಹೋಬಳಿಯಲ್ಲಿ ಬ್ಯಾಂಕ್ ಇದೆ, ಅಗ್ರಹಾರ ಗ್ರಾಮದಲ್ಲಿ ಇಲ್ಲ. ಬಾಗೂರು ಹೋಬಳಿಯಲ್ಲಿ ಕೆನರಾ ಬ್ಯಾಂಕ್ ಶಾಖೆ ಇದೆ. ಬಾಗೂರು ಕೆನರಾ ಬ್ಯಾಂಕ್‌ನಲ್ಲಿ ನಾನು ಇವತ್ತಿನ ವರೆಗೂ ಯಾವುದೇ ಖಾತೆ ತೆರೆದಿರುವುದಿಲ್ಲ. ನಾನು ಚನ್ನರಾಯಪಟ್ಟಣದ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಹಾಗೂ ಎಸ್.ಬಿ.ಐ. ಬ್ಯಾಂಕ್‌ಗಳಲ್ಲಿ ವ್ಯವಹಾರ ಮಾಡುತ್ತೇನೆ. ಪಿತ್ರಾರ್ಜಿತವಾಗಿ ನಿಮಗೆ ಬಂದಂತಹ ಜಮೀನಿನ ಮೇಲೆ ಎಷ್ಟು ಸಾಲ ಪಡೆದಿರುತ್ತೀರಿ ಎಂದರೆ ಸಾಕ್ಷಿ 3 ಲಕ್ಷ ಸಾಲವನ್ನು ಪಡೆದಿರುತ್ತೇನೆ. ಡಿ.ಸಿ.ಸಿ. ಬ್ಯಾಂಕ್ ಅಧೀನದಲ್ಲಿ ಬರುವ ಸೊಸೈಟಿಯಲ್ಲಿ ನಾನು 3 ಲಕ್ಷ ಸಾಲವನ್ನು ಪಡೆದಿರುತ್ತೇನೆ. ಸುಮಾರು 10 – 15 ವರ್ಷದಿಂದ ನಾನು ಸಾಲ ಪಡೆದು ಪ್ರತಿವರ್ಷ ಅದನ್ನು ನವೀಕರಣ ಮಾಡುತ್ತ ಹೋಗುತ್ತಿದ್ದೇನೆ. ವ್ಯವಸಾಯ ಉದ್ದೇಶಕ್ಕಾಗಿ ಈ 3 ಲಕ್ಷ ಸಾಲವನ್ನು ಹೊರತುಪಡಿಸಿ ನಾನು ಬೇರೆ ವ್ಯವಹಾರಕ್ಕಾಗಿ ಯಾವುದೇ ಸಾಲ ಪಡೆದುಕೊಂಡಿಲ್ಲ. ನಾನು ಸಣ್ಣ ವ್ಯವಸಾಯಗಾರನಾಗಿದ್ದು, ಅಲ್ಲದೇ 3 ವರ್ಷ ಸಾಲವನ್ನು ಪ್ರತಿವರ್ಷ ನವೀಕರಣ ಮಾಡುವುದಾಗಿದ್ದರಿಂದ ಒಂದೇ ಸಾರಿ ದೊಡ್ಡ ಮೊತ್ತದ ಹಣವನ್ನು ಕೂಡಿಸಲು ನನಗೆ ಸಾಧ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಶುಂಠಿ, ಆಲೂಗೆಡ್ಡೆ ಹಾಗೂ ಕಬ್ಬನ್ನು ಬೆಳೆಯುವುದರಿಂದ ನನಗೆ ಒಳ್ಳೆಯ ಆದಾಯ ಇದೆ ಎಂದು ನುಡಿಯುತ್ತಾರೆ. ಕಬ್ಬನ್ನು ನಾನು ಯಾವುದೇ ಫ್ಯಾಕ್ಟರಿಗೆ ಕೊಡುವುದಿಲ್ಲ, ಬೆಲ್ಲ ಆಡಿಸಲು ಗಾಣದವರಿಗೆ ಕೊಡುತ್ತೇನೆ.

ನಾನು ತೋಟದಲ್ಲಿ ಆಲೂಗೆಡ್ಡೆ ಬೆಳೆಯುತ್ತೇನೆ. ಹೊಲದಲ್ಲಿ ಶುಂಠಿ ಮತ್ತು ಕಬ್ಬನ್ನು ಹಾಕುತ್ತೇನೆ. ನನ್ನ ತಂದೆ 2011 ನೇ ಸಾಲಿನಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಸಹೋದರರ ಮಧ್ಯೆ ಆಸ್ತಿ ವಿಭಾಗವು 2013-14 ನೇ ಸಾಲಿನಲ್ಲಿ ವಿಭಾಗವಾಗಿರುತ್ತದೆ. ನನ್ನ ತಂದೆ ತೀರಿಕೊಂಡ ಸಂಧರ್ಭದಲ್ಲಿ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ 1 ಲಕ್ಷ ಸಾಲ ಇತ್ತು. ಸದರಿ ಒಂದು ಲಕ್ಷ ಸಾಲವನ್ನು ನಾನೇ ಪಾವತಿ ಮಾಡಿರುತ್ತೇನೆ, ಈ ಬಗ್ಗೆ ನನ್ನ ಬಳಿ ರಶೀದಿ ಇರುತ್ತದೆ. ನನ್ನ ಎಲ್ಲ ಸಹೋದರಿಯರ ಮದುವೆಗಳು ಆಗಿವೆ. ನನ್ನ ತಮ್ಮ ಕೃಷಿ ಮಾಡುತ್ತಾನೆ. ನನ್ನ ತಂದೆ ಜೀವಂತ ಇದ್ದಾಗ ಅವರೇ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿ ಜಮೀನಿನ ವ್ಯವಹಾರಗಳನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು, ಆದರೆ ಅವರಿಗೆ ವಯಸ್ಸಾದ ಕಾರಣ ಹೊರಗಡೆ ಓಡಾಡಲು ಆಗುತ್ತಿರಲಿಲ್ಲ, ಹೀಗಾಗಿ ಹೊರಗಡೆ ಎಲ್ಲೇ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ.

ವಕೀಲರ ಕೋರಿಕೆ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.